# ಕನ್ನಡ ಸಾಹಿತ್ಯದಲ್ಲಿ ಅನುಭಾವ



ಪ್ರಧಾನ ಸಂಪಾದಕರು

ಪ್ರೊ. ಬಿ.ಬಿ. ಡೆಂಗನವರ

ಸಂಪಾದಕರು

ಡಾ. ವಾಯ್.ವಾಯ್. ಕೊಕ್ಕನವರ

ಪ್ರೊ. ದೀಪಾ ಲಗಳಿ

Scanned by CamScanner

**ಅನುಭಾವದಡಿಗೆ........**

ಗುರು ಸೇವೆ ಮಾಡುವಲ್ಲಿ ಇಹದಲ್ಲಿ ಸುಖ
ಲಿಂಗಸೇವೆ ಮಾಡುವಲ್ಲಿ ಪರದಲ್ಲಿ ಸುಖ
ಜಂಗಮ ಸೇವೆಯ ಮಾಡುವಲ್ಲಿ ಇಹಪರವೆಂಬ ಉಭಯ ನಾಸ್ತಿ
ಚಂದೇಶ್ವರ ಲಿಂಗದ ಹಿಂಗದ ಭಾವ.

ನುಲಿಯ ಚಂದಯ್ಯನವರ ವಚನಾನ್ವಯ ಇಹದ ಸುಖಕ್ಕೆ ಹೇಗೆ ಬದುಕಬೇಕು? ಪರದ ಸುಖಕ್ಕೆ ಹೇಗೆ ಬದುಕಬೇಕು? ಎಂಬ ಚಿಂತೆಯಲ್ಲಿ ಬಾಳುವುದಕ್ಕಿಂತ ಈ ಎರಡು ಸುಖದ ಸರಳ ಮಾರ್ಗವೆಂದರೆ ಜಂಗಮ ಸೇವೆ. ಅಂದರೆ ಸಮಾಜ ಸೇವೆ. ಈ ಸೇವೆಯ ಕೈಕಂರ್ಯಕ್ಕೆ ನಮ್ಮ ಮನಸ್ಸುಗಳಿಗೆ ಅನುಭಾವದ ಅರಿವಿರಬೇಕಾಗುತ್ತದೆ. ಕಾಲದ ಅಗತ್ಯಗಳಿಗೆ ತಕ್ಕಂತೆ ಅನುಭಾವದ ಜ್ಞಾನವನ್ನು ಈ ಸಮಾಜ ಹಲವು ಸ್ವರೂಪಗಳಲ್ಲಿ ನಮಗೆಲ್ಲಾ ನೀಡುತ್ತಲೇ ಬರುತ್ತಿದೆ. ಅಂತಹ ಒಂದು ಅರಿವಿನ ಅನುಭಾವದ ಬುತ್ತಿಯೇ ಈ ಕೃತಿ.

ಶಿಕ್ಷಣವೇ ಶಕ್ತಿ ಎಂಬ ಮಾತು ಆಧುನಿಕ ಕಾಲದ ಬೀಜಮಂತ್ರವಾಗಿ ಪ್ರತಿಯೊಬ್ಬರ ಹಕ್ಕಾಗಿ ಆ ಮೂಲಕ ಹೊಸ ಬದುಕಿಗೆ ನಾಂದಿಯಾಯಿತು. ಶಿಕ್ಷಣ ಸರ್ವರಿಗೂ ಧಕ್ಕಲೆಂಬ ಕಾರಣಕ್ಕೆ ಹುಟ್ಟಿಕೊಂಡ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯು ಇಂದು ನಾಡಿನಾದ್ಯಂತ ತನ್ನ ಕಂಪನ್ನು ಪಸರಿಸುತ್ತಿದ್ದು ಸದೃಢ, ಸಶಕ್ತ, ಸಮರ್ಥ ಶಿಕ್ಷಣಾರ್ಥಿಗಳನ್ನು ವಿಶ್ವಪ್ರಜೆಯಾಗಿ ರೂಪಿಸಿ, ಜಾಗತಿಕ ನೆಮ್ಮದಿಗಾಗಿ ಪರಿಶ್ರಮಿಸುತ್ತಿರುವುದು ಇದೀಗ ಇತಿಹಾಸ. ಇಂತಹ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ನಿರಂತರ ಶೈಕ್ಷಣಿಕ ಚಟುವಟಿಕೆಗಳು ನಡೆದೇ ಇರುತ್ತವೆ. ಅಂಥವುಗಳಲ್ಲಿ ಒಂದಾದ ಈ 'ಅನುಭಾವ ಸಾಹಿತ್ಯ' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವು ವರ್ತಮಾನಕ್ಕೆ ಹೊಸ ಹೊಳವು ನೀಡಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ. ಈ ನೆಪದಿಂದ ಹುಟ್ಟಿಕೊಂಡ ಈ ಕೃತಿಯ ಲೇಖನಗಳು ವಿಮರ್ಶಕ ಹಾಗೂ ಚಿಕಿತ್ಸಕ ಬುದ್ಧಿಗೊಳಪಟ್ಟು ರಚನೆಯಾಗಿದ್ದು ಪ್ರಸ್ತುತ ಪರಿಸ್ಥಿತಿಯ ಪರಿಶೋಧನೆಗೆ ಸಾಕ್ಷಿಯಾಗಿವೆ.

ಕರ್ನಾಟಕ ಶಿಕ್ಷಣ ರಂಗದ ಜೀವನಾಡಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆ ತನ್ನಾಂತರ್ಯದಲ್ಲಿ ನೂರೊಂದು ರತ್ನಗಳನ್ನು ಹೊಂದಿರುವ ಮೂಲಕ ವಿಭಿನ್ನ ಹಾಗೂ ವಿಶಿಷ್ಟ ಕಾರ್ಯ ಚಟುವಟಿಕೆಗಳಿಂದ ಪ್ರತಿನಿತ್ಯ ಪ್ರಸ್ತುತವಾಗುತ್ತಿದೆ. ಈ ದಿಸೆಯಲ್ಲಿ ಸಂಸ್ಥೆಯ ಬಂಗಾರಮ್ಮ ಸಜ್ಜನ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ಸಮಸ್ತ ಪ್ರಾಧ್ಯಾಪಕ ಸಿಬ್ಬಂದಿ ವರ್ಗವು ಈ ವಿಚಾರ ಸಂಕಿರಣದಲ್ಲಿ ಅಹರ್ನಿಶ ಪರಿಶ್ರಮಿಸಿದ ಫಲಶ್ರುತಿಯೇ ಪ್ರಸ್ತುತ "ಕನ್ನಡ ಸಾಹಿತ್ಯದಲ್ಲಿ ಅನುಭಾವ". ಸಂಪಾದಿತ ಕೃತಿಯು ವಿವಿಧ ವಿದ್ವಾಂಸರ ವೈಚಾರಿಕ ಲೇಖನಗಳಿಂದ ಮಹೋನ್ನತವಾಗಿದೆ. ಇಲ್ಲಿಯ ಪ್ರತಿಯೊಂದು ಲೇಖನಗಳು ವರ್ತಮಾನಕ್ಕೆ ಹಿಡಿದ ಕನ್ನಡಿಯಾಗಿದ್ದು ಕಾಲದ ಅಗತ್ಯತೆ ಕೃತಿಯ ಸ್ವರೂಪವಾಗಿದೆ. ಒಟ್ಟಾರೆ ಪ್ರಾಂಶುಪಾಲರನ್ನೊಳಗೊಂಡು ಸಮಸ್ತ ಸಿಬ್ಬಂದಿ ಬಳಗಕ್ಕೂ ಅದರಂತೆ ಬಹಳಷ್ಟು ಶ್ರಮವಹಿಸಿ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಈ ಕೃತಿಯನ್ನು ಸಂಪಾದಿಸಿದ ಸಂಪಾದಕರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ ಕೃತಿಯು ಓದುಗರ ಪಾಲಿನ ಬೆಳಕಾಗಲೆಂದು ಹಾರೈಸುತ್ತೇನೆ.

**ಸನ್ಮಾನ್ಯಶ್ರೀ ಎಂ.ಬಿ.ಪಾಟೀಲ**
ಅಧ್ಯಕ್ಷರು, ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆ ವಿಜಯಪುರ

ISBN : 978-81-921407-5-9
ISBN : 978-81-921407-5-9

**ಬೆಳದಿಂದಗಳ ಪ್ರಕಾಶನ, ಬೆಳಗಾವಿ**

Scanned by CamScanner